ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ, ದಿನಾಂಕ ೨೦ನೇ ಮಾರ್ಚಿ ೧೯೯೦ ಫಾಲ್ಗುಣ ೨೯, ೧೯೧೧ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧–೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು]

ಸಂತಾಪ ಸೂಚನೆ

ಅಧ್ಯಕ್ಷರು.—"ವಿಧಾನ ಸಭೆಯ ಮಾಜಿ ಸದಸ್ಯ ಶ್ರೀ ಹೆಚ್. ವೈ. ಮುಂಬರೆಡ್ಡಿಯವರು ೫ನೇ ಫೆಬ್ರುವರಿ, ೧೯೯೦ ರಂದು ನಿಧನರಾದರೆಂದು ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ. ಶ್ರೀಯುತರು ೧೯೫೬–೫೭ನೇ ಸಾಲಿನಲ್ಲಿ ವಿಧಾನ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ".

ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಿದರು)

ಅಧ್ಯಕ್ಷರು.—ದಿವಂಗತರ ಕುಟುಂಬವರ್ಗದವರಿಗೆ ಈ ಸಭೆ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಕಳುಹಿಸಿಕೊಡಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳ ಮೂಡಿಗೆರೆ ತಾಲ್ಲೂಕಿನಲ್ಲಿರುವ ದರಖಾಸ್ತು ಮಂಜೂರಾತಿ ಬಗ್ಗೆ

೬೫೫ ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮೂಡಿಗೆರೆ ತಾಲ್ಲೂಕಿನಲ್ಲಿ ದರಖಾಸ್ತು ಜಮೀನು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು ?

(ಆ) ಅವರಲ್ಲಿ ಹರಿಜನರ ಸಂಖ್ಯೆ ಎಷ್ಟು ?

ಶ್ರೀ ಅಜೀಜ್ ಸೇಠ್ (ಕಂದಾಯ ಸಚಿವರು).—

(ಅ) ೧೯೮೯-೯೦ನೇ ಸಾಲಿನಲ್ಲಿ ೫೧೮ ಅರ್ಜಿದಾರರು, ೧೯೮೯–೯೦ರಲ್ಲಿ ೨೧೮ ಜನ ಅರ್ಜಿದಾರರು.

(ಆ) ೧೯೮೯–೯೦ನೇ ಸಾಲಿನಲ್ಲಿ, ೨೦೯ ಅರ್ಜಿದಾರರು ೧೯೮೯–೯೦ರಲ್ಲಿ ೯೯ ಜನ ಅರ್ಜಿದಾರರು

ಶ್ರೀಮತಿ ಮೋಟಮ್ಮ.—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ತಮ್ಮ ಉತ್ತರದಲ್ಲಿ ಅರ್ಜಿದಾರರ ಸಂಖ್ಯೆಯನ್ನು ಕೊಟ್ಟಿದ್ದಾರೆ ಯಾರಿಗೆ ಭೂಮಿಯನ್ನು ಕೊಟ್ಟಿದ್ದಾರೆ ಎಂದು ತಿಳಿಸಿಲ್ಲ ಒಂದು ವೇಳೆ ಅಲ್ಲಿ ಜಮೀನು ಇಲ್ಲದಿದ್ದರೆ ಸಂಬಂಧಪಟ್ಟವರಿಂದ ಅರ್ಜಿಗಳನ್ನು ಏಕೆ ಸ್ವೀಕಾರ ಮಾಡಿದರು ? ನನಗೆ ಗೊತ್ತಿರುವ ಹಾಗೆ ಆ ಕ್ಷೇತ್ರದಲ್ಲಿ ಸಾಕಷ್ಟು ಜಮೀನು ಇದ್ದರೂ ಸಹ ಹರಿಜನರು ಅರ್ಜಿಗಳನ್ನು ಹಾಕಿರುವುದರಲ್ಲಿ ಒತ್ತುವರಿಯಾಗಿದೆ. ಆದುದರಿಂದ ದಯವಿಟ್ಟು ಒಟ್ಟು ಎಷ್ಟು ಜನ ಹರಿಜನರು ಈ ಬಗ್ಗೆ ಜಮೀನು ಕೋರಿ ಅರ್ಜಿಯನ್ನು ಹಾಕಿದ್ದಾರೆ ? ಅರ್ಜಿ ಕೊಟ್ಟವರಲ್ಲಿ ಎಷ್ಟು ಜನರಿಗೆ ಜಮೀನು ಕೊಟ್ಟಿದ್ದೀರಿ ? ಹಾಗೂ ಉಳಿದವರಿಗೆ ಎಷ್ಟು ಜಮೀನು ಕೊಡಲು ಸಾಧ್ಯ ಎಂಬ ಬಗ್ಗೆ ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.